ಅಧ್ಯಕ್ಷರು: ಸರ್ಕಾರ ಉತ್ತರವನ್ನು ಕೊಡಲೇಬೇಕೆಂದು ರೂಲ್ಸ್‌ನಲ್ಲಿ ಎಲ್ಲಿಯೂ ಇಲ್ಲ. ಮಾನ್ಯ ಸದಸ್ಯರ ಅನುಕೂಲಕ್ಕಾಗಿ ಬಿ.ಎ.ಸಿ.ಯವರು ಕ್ರಯೇಟ್ ಮಾಡಿರುವುದು ಅಷ್ಟೆ. ಶೂನ್ಯ ವೇಳೆ ಎಂದು ಇಲ್ಲವೇ ಇಲ್ಲ.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಸರ್ಕಾರದವರು ಉತ್ತರವನ್ನೇ ಹೇಳದೆ ಇದ್ದರೆ, ಸದಸ್ಯರು ಪ್ರಶ್ನೆಯನ್ನು ಕೇಳಿ ಏನು ಪ್ರಯೋಜನವಾಗುತ್ತದೆ?

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ಸಚಿವರು): ಸರ್ಕಾರ ಉತ್ತರ ಹೇಳಬೇಕಾದ ನಿಯಮಗಳು ಇವೆ. ಆ ನಿಯಮಗಳ ಅಡಿಯಲ್ಲಿ ಸದಸ್ಯರು ನೋಟೀಸ್ ಕಳುಹಿಸಿದರೆ ಸಾಕು.

(ಖೂ) ಆರೋಗ್ಯ ಮತ್ತು ಕುಟುಂಬ ಇಲಾಖೆಯ ಕಿರಿಯ ಸಹಾಯಕರ ವರ್ಗಾವಣೆ ಕುರಿತು.

ಶ್ರೀ ಜಿ.ರಾಜುಗೌಡ(ಹನ್ನೂರು): ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಕಿರಿಯ ಸಹಾಯಕರುಗಳಾದ ಬಸವಣ್ಣ ಮತ್ತು ಪರಶಿವಮೂರ್ತಿ ಎಂಬುವವರು ಸ್ಥಳೀಕರು. ಅವರುಗಳನ್ನು ಸಾರ್ವಜನಿಕರ ದೂರಿನ ಮೇಲೆ ಮೈಸೂರು ಜಿಲ್ಲೆಗೆ ವರ್ಗಾವಣೆಯಾಗಿತ್ತು. ಅವರಿಗೆ ವರ್ಗಾವಣೆಯಾದ ಮೇಲೆ ಅನಧಿಕೃತವಾಗಿ 11 ತಿಂಗಳು ಗೈರಾದರು. ಈ ರೀತಿ ಗೈರಾದ ನಂತರ, ಮತ್ತೆ ಅದೇ ಸ್ಥಳಕ್ಕೆ ಅವರನ್ನು ಹಾಕಿರತಕ್ಕಂಥಾದ್ದು ಬಹಳ ಕಷ್ಟವಾಗಿದೆ. ಪರಶಿವಮೂರ್ತಿ ಎಂಬುವರು ಅಟ್ರಾಸಿಟಿ ಕೇಸಿನಲ್ಲಿ 11 ತಿಂಗಳು ಕಾರಾಗೃಹದಲ್ಲಿದ್ದರು. ಅಂತಹವರನ್ನು ಏನೂ ವಿಚಾರಣೆ ಮಾಡದೇ, ಅವರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಮತ್ತೆ ಅವರನ್ನು ಅದೇ ಸ್ಥಳಕ್ಕೆ ವರ್ಗಾವಣೆ ಮಾಡಿರುವುದು ಬಹಳ ಅನ್ಯಾಯವಾಗಿದೆ. ಅಕೃತ್ಯವಾಗಿದೆ. ಈ ರೀತಿಯ ಒಂದು ಕೆಟ್ಟ ಸಂಪ್ರದಾಯವನ್ನು ಬೆಳೆಸುತ್ತಿದ್ದಾರೆ, ದಯಮಾಡಿ, ಮತ್ತೆ ಅವರನ್ನು ಆ ಸ್ಥಳದಿಂದ ವರ್ಗ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

(ಎ) ಅಡಿಕೆ ಬೆಲೆ ಕುಸಿದಿರುವುದರಿಂದ ಅಡಿಕೆ ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ವಿಶ್ವೇಶ್ವರ ಹೆಗಡೆ(ಅಂಕೋಲ): ಮಾನ್ಯ ಅಧ್ಯಕ್ಷರೇ, ರೈತರು ಆತ್ಮಹತ್ಯೆ

ಮಾಡಿಕೊಳ್ಳುವ ಪ್ರಕರಣದಲ್ಲಿ ನನ್ನ ಕ್ಷೇತ್ರದಲ್ಲಿ ಆಗುತ್ತಿರುವಂತಹದ್ದು ಮತ್ತು ರಾಜ್ಯದ ವಿವಿಧ ಕಡೆಗಳಲ್ಲಿ ಆಗುತ್ತಿರುವಂತಹದ್ದರ ಬಗ್ಗೆ ಎರಡು ನಿಮಿಷದಲ್ಲಿ ಪ್ರಸ್ತಾಪ ಮಾಡಿ ಮುಗಿಸುತ್ತೇನೆ. ಮಾನ್ಯ ಚಂದ್ರೇಗೌಡರು ಕೂಡ ಹಿಂದೆ ಅನುಭವಿಸಿ ಸ್ಪಷ್ಟವಾಗಿರುವುದು. ಅಡಿಕೆ ಬೆಳೆಗಾರರು ಇವತ್ತು ಹತಾಶ ಸ್ಥಿತಿಗೆ ಹೋಗುತ್ತಿದ್ದಾರೆ. ಆ ವಿಷಯದ ಬಗ್ಗೆ ಒಂದು ಅಧ್ಯಯನವಾಗಬೇಕಾಗಿದೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಇಡೀ ರಾಜ್ಯದಿಂದ, ಅಡಿಕೆ ಬೆಳೆಗಾರರು ಒಂದು ನೂರು ಕೋಟಿ ರೂಪಾಯಿಗಳ ಆದಾಯವನ್ನು ಕೊಡುತ್ತಿದ್ದಾರೆ.

(ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್.ತಹಸೀಲ್ದಾರ್)ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಮಾನ್ಯ ಚಂದ್ರೇಗೌಡರಿಗೂ ಇದರ ಬಗ್ಗೆ ಸ್ಪಷ್ಟವಾದ ಮಾಹಿತಿ ಇದೆ. ಕಳೆದ ವರ್ಷ ಇದೇ ಸಮಯದಲ್ಲಿ ಒಂದು ಕ್ವಿಂಟಾಲ್ ಅಡಿಕೆಗೆ ಸುಮಾರು 10 ಸಾವಿರ ರೂಪಾಯಿಗಳ ರೇಟ್ ಇತ್ತು. ಆದರೆ ಇವತ್ತು ಎರಡೂವರೆ ಸಾವಿರ ರೂಪಾಯಿ ಆಗಿದೆ. ಈ ರೀತಿಯಾಗಿರುವುದರಿಂದ ಅಡಿಕೆ ಬೆಳೆಗಾರರು ಬಹಳ ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅವರ ಜೀವನದಲ್ಲಿ ಬಹಳ ಗಂಭೀರವಾದ ಸಮಸ್ಯೆ ಉದ್ಭವವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಯೋಚಿಸಬೇಕು. ಅಡಿಕೆ ಬೆಳೆ ಹೆಚ್ಚಾಗಿರುವ ಕಾರಣದಿಂದ ದರ ಕುಸಿದಿದೆಯೋ ಅಥವಾ ಬೇರೆ ದೇಶದಿಂದ ಬರುತ್ತಿರುವುದರಿಂದ ಕುಸಿದಿದೆಯೋ ಅಥವಾ ಇದರ ಬಗ್ಗೆ ಹೆಚ್ಚು ಸಂಶೋಧನೆ ಮಾಡುವುದರ ಮೂಲಕ, ನಾವು ಮಾರುಕಟ್ಟೆ ವ್ಯವಸ್ಥೆಯನ್ನು ಹೆಚ್ಚು ಕಲ್ಪಿಸಿಕೊಡುವ ಮೂಲಕ, ಅಡಿಕೆ ದರವನ್ನು ಹೆಚ್ಚಿಸುವಂತಹ ಪ್ರಯತ್ನವನ್ನು ಮಾಡಬಹುದೇ ಹೇಗೆ, ಈ ರೀತಿ ಬೇರೆ ಬೇರೆ ವಿಭಾಗದಲ್ಲಿ ಯೋಚನೆ ಮಾಡಬೇಕಾಗಿದೆ. ಕ್ಯಾಂಪ್ಕೊ ಇದೆ, ಬೇರೆ ಬೇರೆ ಸಂಘ ಸಂಸ್ಥೆಗಳಿವೆ. ಅವರು ತಮ್ಮದೇ ಆದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಆದರೆ, ಇಷ್ಟು ತೀವ್ರವಾಗಿ ಅಡಿಕೆ ಬೆಳೆ ಕುಸಿದಂತಹ ಸಂದರ್ಭದಲ್ಲಿ ಸರ್ಕಾರ ಅವರ ರಕ್ಷಣೆಗೆ ಹೋಗಬೇಕಾಗಿದೆ. ಮತ್ತು ಅಡಿಕೆ ಬೆಳೆಗಾರರಿಗೆ ವಿಶ್ವಾಸವನ್ನು ತುಂಬುವಂತಹ ಪ್ರಯತ್ನಗಳನ್ನು ಮಾಡಬೇಕಾಗಿದೆ. ಜನರ ಜೀವಕ್ಕೆ, ಆಸ್ತಿಗೆ ಭದ್ರತೆಯನ್ನು, ವಿಶ್ವಾಸವನ್ನು ಕೊಡುವಂಥ ಮೊದಲನೆಯ ಸಂದೇಶ ಸರ್ಕಾರದ್ದು ಆಗಬೇಕು. ಒಂದು ವಾರದ ಹಿಂದೆ ನಮ್ಮ ಹೊನ್ನಾವರದಲ್ಲಿ ಅಡಿಕೆ ಬೆಳೆಗಾರ ದಂಪತಿಗಳು ಆತ್ಮಹತ್ಯೆ ಮಾಡಿಕೊಂಡರು. ಹಾಗೆಯೇ ಪುತ್ತೂರಿನಲ್ಲಿ ಮೂರು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಯ ಪ್ರವೃತ್ತಿ ಬೆಳೆಯುತ್ತಿರುವ ಬಗ್ಗೆ ಸಂಶೋಧನೆ ಮಾಡಲು ಒಂದು ತಂಡವನ್ನು ರಚನೆ ಮಾಡುವುದಾಗಿ ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅದು ಯೋಗ್ಯವಾದಂಥ ಸಲಹೆ. ಹಾಗೆಯೇ ಅಡಿಕೆ ಬೆಲೆ ಪತಕ್ಕಾಗಿ ಕುಸಿಯುತ್ತಿದೆ ಎಂಬ ಬಗ್ಗೆ ಅಧ್ಯಯನವನ್ನು ಸರ್ಕಾರ ಮಾಡಿಸಬೇಕು, ಬೆಳೆಗಾರರಿಗೆ ವಿಶ್ವಾಸವನ್ನು ಮೂಡಿಸುವ ಕೆಲಸವನ್ನು ಮಾಡಬೇಕು.

ಟಿ.ಒ.ಟಿ. ಯನ್ನು ರದ್ದು ಮಾಡುವುದಾಗಿ ಸರ್ಕಾರ ಆದೇಶವನ್ನು ಹೊರಡಿಸಿತು. ಆದರೆ ಅದನ್ನು ಏಕೋ ತಡೆಹಿಡಿದಿದ್ದಾರೆ. ಟಿ.ಒ.ಟಿ ರದ್ದು ಮಾಡುವ ಆದೇಶವನ್ನೇನು ತಡೆಹಿಡಿದಿದ್ದೀರಿ ಅದನ್ನು ವಾಪಸ್ ತೆಗೆದುಕೊಂಡು ಆ ಆದೇಶ ಜಾರಿಯಲ್ಲಿ ಬರುವಂತೆ ಮಾಡಬೇಕು. ಅಡಿಕೆಯ ಮೇಲೆ ನಾಲ್ಕು ಪರ್‌ಸೆಂಟ್ ತೆರಿಗೆ ಇದೆ. ಅದನ್ನೂ ತಡೆಹಿಡಿಯುವುದಾಗಿ ಸರ್ಕಾರ ಹೇಳಿತ್ತು. ಈ ಎಲ್ಲಾ ಹಿನ್ನೆಲೆಯಲ್ಲಿ ಅಡಿಕೆ ಬೆಳೆ ಕುಸಿದಿರುವ ಬಗ್ಗೆ ಅಧ್ಯಯನ ಮಾಡಲು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು. ಇದನ್ನು ಮಾಡುವಾಗ ಕ್ಯಾಂಪ್ಕೋ ಮತ್ತು ಇನ್ನಿತರೆ ಸಂಘ ಸಂಸ್ಥೆಗಳ ಸಲಹೆಯನ್ನು ಪಡೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಾನು ಕಾನೂನಿನ ಬಗ್ಗೆ ಹೇಳಬಹುದೇ ಹೊರತು ಅಡಿಕೆ ವಿಚಾರವನ್ನು ಹೇಳಲು ಆಗುವುದಿಲ್ಲ! ಆದರೂ ಅಡಿಕೆ ಬೆಳೆಗಾರರ ಪ್ರತಿನಿಧಿಯಾಗಿ ನನಗೆ ಈ ಸಮಸ್ಯೆಯ ಅರಿವಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡದಲ್ಲಿ ಬೆಳೆಯತಕ್ಕಂಥ 'ಚಾಳಿ' ಎಂಬ ಬೆಳೆಯ ಕುಸಿತವಾಗಿದೆ. ಈ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಉಪಾಧ್ಯಕ್ಷರೆ, ಪುತ್ತೂರು ತಾಲ್ಲೂಕಿನಲ್ಲಿ ಮೂರು ಜನ ಅಡಿಕೆ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದ್ದರಿಂದ ಜಿಲ್ಲಾಧಿಕಾರಿಯವರಿಗೆ ತಾವು ವಿಶೇಷವಾಗಿ ಆ ಭಾಗದಲ್ಲಿ ಆಗುವಂಥ ಅಡಿಕೆಬೆಳೆಗಾರರ ಆತ್ಮಹತ್ಯೆಯ ಬಗ್ಗೆ ಪರಿಶೀಲನೆ ಮಾಡುವಂತೆ ಆದೇಶವನ್ನು ಕೊಡಬೇಕು. ಮಾನ್ಯ ಉಸ್ತುವಾರಿ ಸಚಿವರೂ ಇದ್ದಾರೆ. ಅವರೂ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

(ಏ) ಗ್ರಾಮಸಭೆಯ ದಿನಾಂಕವನ್ನು ನಿಗದಿ ಮಾಡುವುದು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷರೆ, ಗ್ರಾಮ ಸಭೆಯ ದಿನಾಂಕವನ್ನು ನಿಗದಿ ಮಾಡಲು ಗ್ರಾಮಪಂಚಾಯಿತಿಗೆ ಅಧಿಕಾರವಿದೆಯೋ ಅಥವಾ ತಾಲ್ಲೂಕು ಪಂಚಾಯಿತಿಗೆ ಅಧಿಕಾರವಿದೆಯೋ ಎಂಬುದು ನನ್ನ ಪ್ರಶ್ನೆಯಾಗಿದೆ. ಈ ಹಿಂದೆ ನಾನು ಇದೇ ಪ್ರಶ್ನೆಯನ್ನು ಕೇಳಿದ್ದಾಗ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ. ನನ್ನ ಕ್ಷೇತ್ರದ ಕೋಟಾ ಪಂಚಾಯಿತಿಯ ಗ್ರಾಮಸಭೆಯನ್ನು ಗ್ರಾಮಪಂಚಾಯಿತಿಯವರು ನಿಗದಿ ಮಾಡಿದ್ದು ಅದಕ್ಕೂ ಮೊದಲೇ ತಾಲ್ಲೂಕು ಪಂಚಾಯಿತಿಯವರು ಗ್ರಾಮಸಭೆಯನ್ನು ಮಾಡುವ ದಿನಾಂಕವನ್ನು ನಿಗದಿ ಮಾಡಿದ್ದರು. ತಾಲ್ಲೂಕು ಪಂಚಾಯಿತಿಯವರು ಹಾಗೆ ಮಾಡಿದ್ದು ತಪ್ಪು, ಗ್ರಾಮಸಭೆಗಳ ದಿನಾಂಕವನ್ನು ನಿಗದಿ ಮಾಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಮಾತ್ರ ಇದೆ, ತಾಲ್ಲೂಕು